ಪೂರ್ಣಾನಂದ ಅಂತ. ಅಪ್ಪ ಮೆಡಿಕಲ್ಗೆ ಹೋಗು ಅಂದ್ರು. ಆದ್ರೆ ನಾನು ಅಗ್ರಿಕಲ್ಚರಲ್‌ಸೈನ್ಸ್ ತಕೊಂಡೆ. ಫೈನಲ್ ಮುಗಿಸ್ಕೊಂಡು ಬಂದಿದ್ದೀನಿ. ಸರ್ಕಾರಿ ಉದ್ಯೋಗವೇನು ಬೇಡ, ಊರಲ್ಲೇ ಇದ್ದು ವ್ಯವಸಾಯ ಮಾಡಿಸ್ತೀನಿ ಅಂತ ಅಪ್ಪನಿಗೆ ತಿಳಿಸಿದ್ದೀನಿ. ಅಪ್ಪನ್ಗೆ ನೀವೂ ಒಂದ್ಮಾತು ಹೇಳಿ'' ಅನ್ನುತ್ತ ನಕ್ಕು ಬೈಕ್ ಸ್ಟಾರ್ಟ್ ಮಾಡಿದ. ಈಗಿನ ಜನರೇಷನ್‌ಗೆ ಒಳ್ಳೆ ಅನುಕೂಲ ಕಲ್ಪಿಸಿದರೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುತ್ತಾರೆ ಅನಿಸಿತು. ತಲೆದೂಗಿ, ''ಸರಿ ನಿರ್ಧಾರನಪ್ಪ'' ಅಂದೆ. ಬಹು ಖುಷಿಗೊಂಡು ಗಾಳಿಗೆ ಚದುರುತ್ತಿದ್ದ ತಲೆಗೂದಲನ್ನು ನೀವಿಕೊಳ್ಳುತ್ತ ಕೊಂಚ ಬೈಕಿನ ವೇಗ ಹೆಚ್ಚಿಸಿದ.

ಸಾಲಿಗ್ರಾಮದ ಹೈಸ್ಕೂಲಿಗೆ ಹೋಗಿಬರುತ್ತಿದ್ದ ಈ ನಮ್ಮ ಹಳೆಯ ದಾರಿ ಈಗ ಬೇಗ ಸಾಗುತ್ತಿತ್ತು. ಮುಂದೆ ಹೋದರೆ ಆನಂದರಾಜು ಊರು. ಅದಕ್ಕಿನ್ನು ಮುನ್ನವೇ ಎಡಕ್ಕೆ ತಿರುಗಿ ಕೆರೆ ಏರಿ ಮೇಲೆ ಹೋದರೆ ನಮ್ಮ ಊರು. ಈ ಎರಡು ಊರುಗಳ ನಡುವೆ ಕೆರೆ. ನನ್ನ ಜೊತೆ ಓದುತ್ತಿದ್ದ ಆ ಗೌರಿಯನ್ನು ಇವನೂರಿಗೆ ತಾನೆ ಮದುವೆ ಮಾಡಿಕೊಟ್ಟಿದ್ದು ಎಂಬುದು ನೆನಪಾಯಿತು. ಅವಳು ಮದುವೆಯಾಗಿ ಬಂದ ಮೇಲೆ ಒಮ್ಮೆಯೂ ನೋಡಲಾಗಲಿಲ್ಲ. ಈ ಸಲ ಅವಳನ್ನು ನೋಡಬಹುದು, ಮಾತನಾಡಬಹುದು ಅನಿಸಿ ಮನಸ್ಸು ಹುರುಪುಗೊಂಡಿತು. ನಾನು ಎಳೆದು ಬಿಟ್ಟ ಬಿಸಿ ಉಸಿರು ಕಾಲರಿಲ್ಲದ ಪೂರ್ಣಾನಂದನನ ಕುತ್ತಿಗೆಗೆ ತಾಕಿರಬೇಕು. ಅವನು ಕತ್ತು ತಿರುಗಿಸಿ, ''ಹಳೆದೆಲ್ಲ ನೆನಪಾಗ್ತ ಇದೆಯಾ ಅಂಕಲ್, ಓದೋವಾಗ ಈ ಹಾದೀಲಿ ನಿಮ್ಮದೇ ಆಟವಂತೆ. ಅಪ್ಪ ಹೇಳುತ್ತಿದ್ರು'' ಅಂದ.

ನಾನು ನಕ್ಕೆ. ಹುಡುಗ ಸರಿಯಾಗಿ ಹೇಳಿದ್ದಾನೆ. ಬಿಚ್ಚಿಕೊಳ್ಳತೊಡಗಿದ್ದ ನೆನಪುಗಳ ಸುರುಳಿಯ ಆಹ್ಲಾದವನ್ನು ಹೀರುತ್ತ ಕತ್ತನ್ನು ರಸ್ತೆ ಬದಿಯ ಅತ್ತ ಇತ್ತ ಅಲುಗಾಡಿಸುತ್ತ, ''ಆಗ ಇಲ್ಲೆಲ್ಲ ಬರೀ ಹೊಲ. ಮಳೆ ಬಿದ್ರೆ ಬೆಳೆ. ಇಲ್ಲದಿದ್ರೆ ಬರಡು. ಈಗ್ನೋಡು ಅಡಿಕೆ ತೆಂಗು! ಹಸಿರೇ ಹಸಿರು'' ಉದ್ಗರಿಸಿದೆ. ಅವನು, ''ಹೂ ಅಂಕಲ್! ಗಂಗಾಕಲ್ಯಾಣ ಯೋಜನೆಯಡಿ ಬೋರ್ವೆಲ್ ಕೊರೆಸಿ ವ್ಯವಸಾಯ ಮಾಡ್ತಾ ಅವರೆ. ನಮ್ಮ ಚಿಕ್ಕೂರಲ್ಲೇ ಕನಿಷ್ಠ ಐವತ್ತು ಬೋರ್ವೆಲ್ ಇರಬೌದು'' ಅಂತ ವಿವರಿಸಿದ.

ಆಗ, ಒಮ್ಮೆ, ಅಣ್ಣನಿಗೆ ನಾನೂ ಹೇಳಿದ್ದೆ: ಸರ್ಕಾರ ಧನಸಹಾಯ ಮಾಡುತ್ತೆ. ಬೋರ್ವೆಲ್ ತೆಗೆಸಿ ಒಣ ಭೂಮೀಲಿ ವರ್ಷಕ್ಕೆರಡು ಬೆಳೆ ತೆಗೀಬೌದು ಅಂತ. ಅವನು ನಾಕೈದು ಕಡೆ ಕೊರೆಸಿದ್ರು ಒಂದನಿ ನೀರು ಬರಲಿಲ್ಲ. ಕೈ ಸುಟ್ಟುಕೊಂಡಿದ್ದಾಯ್ತು. ಎಲ್ಲೋ ಕೂತ್ಕೊಂಡು ಹೇಳಿದಂಗಲ್ಲ ಇಲ್ಲಿ ನಿಂತು ಗೇಯೋದು ಅಂತ ರೇಗಾಡಿದ್ದ. ಶ್ರಮ ಪಡದೆಯೆ ಸುಖ ಬೇಕು ಅನ್ನೊ ಮಂದಿಯ ಬೆನ್ನು ಬಗ್ಗಿಸುವುದು ದುಸ್ಸಾಹಸ!

''ಅಂಕಲ್ ಇನ್ನೂ ಟೈಂ ಇದೆ. ನೋಡಿ, ಅದೇ ನಮ್ಮ ತೋಟ. ನೀವು ಹೂ ಅಂದ್ರೆ ತೋಟ ನೋಡ್ಕೊಂಡು, ಎಳನೀರು ಕುಡಿದು ಹೋಗಬೇಕು'' ಅಂದ. ನನಗೆ ಅವನು ಹೇಳುವುದರತ್ತ ನಿಗಾ ಇರಲಿಲ್ಲ. ಅವನೇ ಕತ್ತು ತಿರುಗಿಸಿ, ''ಅಂಕಲ್ ಫ್ಲಾಷ್‌ಬ್ಯಾಕ್‌ಗೆ ಹೋಗಿದ್ದೀರಿ ಅಂತ ಕಾಣುತ್ತೆ. ಆಗ ಊರ್ನ ಅಷ್ಟು ಹಚ್ಕೊಂಡಿದ್ದೋರು ಆಮೇಲೆ ಕಟ್ ಮಾಡಿಬಿಟ್ರಂತೆ. ನಮ್ಮೂರ್ಗೂ ಬರೋದನ್ನೂ ಬಿಟ್ಟುಬಿಟ್ರಂತೆ. ಯಾಕೆ?'' ಅಂತ ಬೈಕು ನಿಲ್ಲಿಸಿದ. ಆಗ ಯಾಕೆ ಅಂತ ಪಟ್ಟು ಹಿಡಿದು ಯೋಚಿಸಿದವನಲ್ಲ. ಗೆಳೆಯನದು ವ್ಯವಸಾಯ ಮತ್ತು ರಾಜಕೀಯ ಕ್ಷೇತ್ರ; ತನ್ನದು ಸರ್ಕಾರಿ ಉದ್ಯೋಗ. ಈ ಎರಡೂ ಭಿನ್ನ ಅಂತ ಭಾವಿಸಿಕೊಂಡ ಅಭಿಪ್ರಾಯವೋ ಅಥವಾ ಸ್ವಂತ ಅಣ್ಣನಿಂದಲೇ ಅನ್ಯಾಯಕ್ಕೊಳಗಾದ ಜಿಗುಪ್ಸೆಯೊ? ಈ ಊರುಗಳೊಂದಿಗಿನ ಒಡನಾಟವೇ ನಿಂತುಹೋಯಿತು. ನಾನು ಮುಖ ಕೊಂಕಿಸಿದೆ. ಇದು ನನಗೆ ಬೇಡದ ಸಂಗತಿ ಅಂತ ಪೂರ್ಣಾನಂದನಿಗೆ ಅನಿಸಿರಬೇಕು. ಒಡನೆಯೇ, ''ನೋಡಿ ಅದೇ ನಮ್ಮ ತೋಟ. ಕೊಂಚ ದೂರ ಅಷ್ಟೆ. ಬೈಕಿನಲ್ಲಿ ಹೋಗೋಣ?'' ಅಂದ.